4296 (4937) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಭಾಗಗಳಿಂದ ಶಿವಮೊಗ್ಗದ ಮೂಲಕ ಧರ್ಮಸ್ಥಳಕ್ಕೆ ಹೋಗುವ ಬಸ್ ಸಂಖ್ಯೆ ಎಷ್ಟು; (ಪ್ರತಿ ಬಸ್ ಶಿವಮೊಗ್ಗದಿಂದ ಧರ್ಮಸ್ಥಳಕ್ಕೆ ಹೊರಡುವ ವೇಳೆ ವಿವರ ನೀಡುವುದು);

ಆ) ತೀರ್ಥಹಳ್ಳಿಯಿಂದ ಧರ್ಮಸ್ಥಳಕ್ಕೆ ನೇರ ಬಸ್ ಸಂಪರ್ಕ ಇಲ್ಲದಿರುವುದರಿಂದ ಪ್ರಯಾಣಿಕರಿಗೆ ಅನಾನುಕೂಲವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ರಾಜ್ಯ ವಿವಿಧ ಕಡೆಗಳಿಂದ ಶಿವಮೊಗ್ಗ, ಚಿಕ್ಕಮಗಳೂರು ಮೂಲಕ ಧರ್ಮಸ್ಥಳಕ್ಕೆ ಹೋಗುವ ಬಸ್‌ಗಳಲ್ಲಿ ಕನಿಷ್ಟ ಬೆಳಿಗ್ಗೆ ಹಾಗೂ ರಾತ್ರಿ ಎರಡು ಬಸ್‌ಗಳನ್ನು ಶಿವಮೊಗ್ಗ-ತೀರ್ಥಹಳ್ಳಿ ಕೊಪ್ಪ-ಶೃಂಗೇರಿ ಮಾರ್ಗವಾಗಿ ಧರ್ಮಸ್ಥಳಕ್ಕೆ ಹೋಗುವಂತೆ ಬಸ್ ವ್ಯವಸ್ಥೆ ಮಾಡಲು ಸರ್ಕಾರ ಕ್ರಮಕ್ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ವಿವರಗಳನ್ನು ಲಗತ್ತಿಸಿದೆ.

ಆ) ಇಲ್ಲ.

ಇ) ಹೌದು.

ANNEXURE – A

Statement showing the details about the services operating from different places in the State to Dharmasthala via Shimoga & its departure timing at Shimoga.

Sl. No.	Route		Time of Departure	Class of Service
	From	To		
1	Bijapur	Dharmasthala	0500	Express
2	Shimoga	-do-	0530	-do-

3	Alanda	-do-	0600	-do-
4	Shimoga to M'lore	Via – do -	0715	-do-
5	Shimoga	DSL	0730	-do-
6	Shimoga to M'lore	Via – do -	0745	-do-
7	Shimoga to Puttur	Via – do -	0815	-do-
8	Shimoga to Puttur	Via – do -	0900	-do-
9	Shimoga	DSL	0930	-do-
10	Byadagi	DSL	1000	-do-
11	Shimoga to M'lore	Via -do-	1030	-do-
12	Shimoga	DSL	1045	-do-
13	Shimoga to Puttur	Via – do -	1115	-do-
14	Sirsi	-do-	1200	-do-
15	Koppala	-do-	1530	-do-
16	Nippani	-do-	1700	-do-
17	Nippani	-do-	1730	-do-
18	Bellary	-do-	1830	-do-
19	Shimoga to Chikmagalur	-do-	1900	Semi-deuluxe
20	Davanagere	Dharmasthala	2100	Express
21	Jamkhandi	-do-	2130	-do-
22	Bellary	-do-	2230	-do-

23	Dharwad to M'lore	Via DSL	2330	-do-
24	Yalaburga	Dharmasthala	2345	-do-
25	Raichur	-do-	0000	-do-
26	Hadagali	-do-	0100	-do-
27	Lingasgur	-do-	0130	-do-
28	Mundargi	-do-	0200	-do-

4297 (4652) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) :- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರವು ಸೇರಿದಂತೆ ರಾಜ್ಯದಲ್ಲಿ ಇತ್ತೀಚೆಗೆ ಸುರಿದಂಥ ಭಾರೀ ಮಳೆಯಿಂದಾಗಿ ಉಂಟಾಗಿರುವಂತಹ ಹಳೆಯ ಕಟ್ಟಡಗಳ ನಾಶ, ಮನೆಗಳ ನಾಶ, ಗೋಡೆ ಕುಸಿತ ಹಾಗೂ ಸಾವು–ನೋವುಗಳಾಗಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಮಳೆಯ ಅನಾಹುತದಿಂದಾಗಿ ಮನೆ, ಆಸ್ತಿ–ಪಾಸ್ತಿ ಕಳೆದುಕೊಂಡವರಿಗೆ, ಜೀವ ಕಳೆದುಕೊಂಡ ಕುಟುಂಬಗಳಿಗೆ ಸರ್ಕಾರದಿಂದ ನೀಡಿರುವ ಪರಿಹಾರವೇನು;

ಇ) ಬೆಂಗಳೂರಿನಲ್ಲಿ ಮಳೆ ನೀರು ಸರಿಯಾದ ಮಾರ್ಗದಲ್ಲಿ ಸರಾಗವಾಗಿ ಹರಿದು ಹೋಗಲು ಸುಸಜ್ಜಿತ ಒಳಚರಂಡಿ ವ್ಯವಸ್ಥೆ ಕೊರತೆಯಿಂದ ಮಳೆ ನೀರು ಚರಂಡಿ ಮೂಲಕ ಮನೆಗಳಿಗೆ ನುಗ್ಗಿ ಹಾನಿಯಾಗಿರುವುದರ ಬಗ್ಗೆ ಕೈಗೊಂಡ ಕ್ರಮಗಳೇನು;

ಈ) ಈ ನೀರು ಸರಾಗವಾಗಿ ಹರಿದುಹೋಗಿ ಮನೆಗಳಿಗೆ ನುಗ್ಗದಂತೆ ತಡೆಯಲು ಸರಿಯಾದ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸರ್ಕಾರ ಮುಂದಾಗುವುದೇ;

ಉ) ಇಂತಹ ಹಾನಿಗೊಳಗಾದವರಿಗೂ ಪರಿಹಾರವನ್ನು ನೀಡಲಾಗಿದೆಯೇ, (ವಿವರ ನೀಡುವುದು)?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಯವರು) :

ಅ) ಬಂದಿದೆ.